**2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ಕೆ.ಜಿ.ಎಫ್,**

**ಸಿ.ಸಿ. ಸಂಖ್ಯೆ: 2603/2023**

**ಸಿ.ಡಬ್ಲೂ:6 /ಪಿ.ಡಬ್ಲೂಃ 3**

**ಪ್ರಮಾಣೀಕರಿಸಿದ ದಿನಾಂಕಃ11-11-2025**

| | |
|---|---|
| **ಹೆಸರು** | ಅಜಯ್ |
| **ತಂದೆಯ ಹೆಸರು** | ರಮೇಶ್ |
| **ವಯಸ್ಸು** | 30 ವರ್ಷ |
| **ವೃತ್ತಿ** | ವೆಲ್ಡಿಂಗ್ ಕೆಲಸ |
| **ವಾಸ** | **ಕೆಜಿಎಫ್** |

**ಮುಖ್ಯ ವಿಚಾರಣೆಃ- ಮಾನ್ಯ ಸ.ಸ.ಅ ರವರಿಂದಃ-**

1. ಚಾಸಾ 5 ನನಗೆ ಗೊತ್ತಿಲ್ಲ. ನ್ಯಾಯಾಲಯದ ಮುಂದೆ ಇರುವ 1 ಮತ್ತು 2 ನೇ ಆರೋಪಿ ನನಗೆ ಗೊತ್ತಿಲ್ಲ.

2. ನನಗೆ ಈ ಪ್ರಕರಣದ ಬಗ್ಗೆ ಏನು ಗೊತ್ತಿರುವುದಿಲ್ಲ. ಸಾಕ್ಷಿಗೆ ನಿಪಿ.1 ಮತ್ತು ನಿಪಿ7 ನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸುತ್ತಾರೆ. ಸದರಿ ದಾಖಲೆಗಳು ಸ್ಥಳ ಮತ್ತು ಅಮಾನತು ಪಂಚನಾಮೆಗಳಾಗಿದ್ದು ಸಾಕ್ಷಿಯ ಸಹಿಗಳನ್ನು ಈಗ ನಿಪಿ.1 ಸಿ ಮತ್ತು ನಿಪಿ7 ಬಿ ಎಂದು ಗುರುತಿಸಲಾಯಿತು. ಸದರಿ ದಾಖಲೆಗಳ ಅಂಶಗಳ ಬಗ್ಗೆ ನನಗೆ ಗೊತ್ತಿಲ್ಲ. ಈ ಬಗ್ಗೆ ನಾನು ಪೋಲೀಸರಿಗೆ ಯಾವುದೇ ಹೇಳಿಕೆಯನ್ನು ನೀಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ. ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುತ್ತಾರೆ. ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ಸ್ಥಳ ಮತ್ತು ಅಮಾನತುಪಂಚನಾಮೆಯ ಸಾಕ್ಷಿದಾರರಾಗಿದ್ದು ಸದರಿ ದಾಖಲೆಯ ಅಂಶಗಳಿಗೆ ಮತ್ತು ತನ್ನ ಹೇಳಿಕೆಯ ಅಂಶಗಳಿಗೆ ವಿರುದ್ಧವಾಗಿ ಹೇಳುವ ಕಾರಣ ಅವರ ಮನವಿಯನ್ನು ಪರಿಗಣಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ- ಮಾನ್ಯ ಸ.ಸ.ಅ ರವರಿಂದಃ-**

3. ದಿಃ 25.06.2023 ರಂದು ಮ.12.30 ಗಂಟೆಗೆ ನಾನು ಮತ್ತು ಚಾಸಾ5 ರವರು ಎಸ್ ಟಿ ಬ್ಲಾಕ್ ಕಡೆ ಹೋಗುತ್ತಿರುವಾಗ ಊರಿಗಾಂ ಪೋಲೀಸ್ ಠಾಣೆಯ ಪಿ ಎಸ್ ಐ ಆದ ಚಾಸಾ1 ರವರು ನಮ್ಮನ್ನು ಕರೆದು ದಿಃ25.06.2023 ರಂದು ಮ.12.00 ಗಂಟೆ ಸಮಯದಲ್ಲಿ ಅವರು ಮತ್ತು ಅವರ ಸಿಬ್ಬಂದಿಗಳು ಸರ್ಕಾರಿ ಜೀಪಿನಲ್ಲಿ ಗಸ್ತುವಿನಲ್ಲಿದ್ದಾಗ ಮ.12.15 ಗಂಟೆಗೆ ಎಸ್ ಟಿ ಮತ್ತು ಇ ಟಿ ಬ್ಲಾಕ್ ಕಡೆ ಹೋಗುವ ರಸ್ತೆಯ ತಿರುವಿನಲ್ಲಿ ಯಾರೋ ಆಸಾಮಿಯು ತಳ್ಳುವ ಗಾಡಿಯಲ್ಲಿ ಪೀಸುಗಳನ್ನು ಇಟ್ಟುಕೊಂಡು ಬುಲೆನ್ಸ್ ಶಾಪ್ಟ್ ಕಡೆ ಇಂದ ಎಸ್ ಟಿ ಬ್ಲಾಕ್ ಕಡೆ ಹೋಗಲು ತಳ್ಳುವ ಗಾಡಿಯಲ್ಲಿ ತಳ್ಳಿಕೊಂಡು ಬರುತ್ತಿದ್ದರು ಎಂದು ಹೇಳಿರುತ್ತಾರೆ ಎಂದರೆ

ಸರಿಯಲ್ಲ. ನಂತರ ಚಾಸಾ1 ರವರು ಮತ್ತು ಇತರರನ್ನು ನೋಡಿ ಆ ಆಸಾಮಿಗಳು ತಮ್ಮ ಗಾಡಿಯನ್ನು ತಿರುಗಿಸಲು ಪ್ರಯತ್ನಿಸಿದಾಗ ಅವರು ಸಂಶಯಗೊಂಡು ಅದರ ಬಗ್ಗೆ ವಿಚಾರಿಸಿದಾಗ ಅವರು ಸರಿಯಾಗಿ ಉತ್ತರ ನೀಡದೇ ಇರುವ ಬಗ್ಗೆ ಮತ್ತು ಸದರಿ ವಸ್ತುಗಳನ್ನು ಅವರು ಕಳ್ಳತನ ಮಾಡಿಕೊಂಡು ಬಂದಿರುವ ಬಗ್ಗೆ ಸಂಶಯಗೊಂಡು ಅವುಗಳನ್ನು ಅಮಾನತುಪಡಿಸಿಕೊಳ್ಳುವ ಸಲುವಾಗಿ  ಪಂಚರಾಗಲು ನಮ್ಮಲ್ಲಿ ಕೋರಿಕೊಂಡರು ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾವು ಒಪ್ಪಿ ಅಲ್ಲಿ ಇದ್ದು ಆ ಸಮಯದಲ್ಲಿ ಆರೋಪಿತರುಗಳ ಹೆಸರುಗಳು  ಮುಂಗತ ಬಾಬು ಅಲಿಯಾಸ್ ಕುಟ್ಟಿ ಪ್ರವೀಣ್ ಎಂದು ತಿಳಿದುಬಂತು ಎಂದರೆ ಸರಿಯಲ್ಲ. ನಂತರ ಪೋಲೀಸರು ಸದರಿ ಗಾಡಿಯಲ್ಲಿದ್ದ ಮರದ ಪೀಸುಗಳನ್ನು ಪರಿಶೀಲಿಸಲಾಗಿ ಒಟ್ಟು 7 ಪೀಸುಗಳು ಇದ್ದ ಬಗ್ಗೆ ಕಂಡು ಬಂದಿದ್ದು ಸದರಿ ತಳ್ಳುವ ಗಾಡಿಗೆ 2 ಚಕ್ರಗಳಿದ್ದು ಹಸಿರು ಬಣ್ಣದಿಂದ ಕೂಡಿದ ಕಬ್ಬಿಣದ್ದಾಗಿರುತ್ತದೆ ಎಂದರೆ ಸರಿಯಲ್ಲ. ನಂತರ ಪೋಲೀಸರು ನನ್ನ ಮತ್ತು ಚಾಸಾ5 ರವರ ಸಮಕ್ಷಮ ನಿಪಿ.1 ರಂತೆ ಮ.12.30 ಗಂಟೆ ಇಂದ 1.15 ಗಂಟೆಯವರೆಗೆ ಅಮಾನತು ಪಂಚನಾಮೆ ಮತ್ತು ಸ್ಥಳ ಪಂಚನಾವೆಯನ್ನು ಮಾಡಿ ಅವುಗಳನ್ನು ವಶಕ್ಕೆ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಿಪಿ.1 ರ ಅಂಶಗಳನ್ನು ತಳಿದುಕೊಂಡು ನಾನು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ.

4. ನಂತರ ಅದೇ ದಿನ ಪೋಲೀಸರು ಮಾರಿಕುಪ್ಪಂನಲ್ಲಿರುವ ಬಿಜಿಪಿಎಂಎಲ್ ಗೆ ಸೇರಿದ ಎನ್ ಐ ಎಂ ಹೆಚ್ ಬಂಗ್ಲೋ ಒಳಗಡೆ ಸಂಜೆ 4.45 ಗಂಟೆ ಇಂದ 5.30 ಗಂಟೆಯವರೆಗೆ ನಿಪಿ7 ರಂತೆ ಸ್ಥಳ ಮಹಜರು ಕ್ರಮ ಜರುಗಿಸಿರುತ್ತಾರೆ ಎಂದರೆ ಸರಿಯಲ್ಲ. ಆ ಸಮಯದಲ್ಲಿ ನಾನು ಹಾಜರಿದ್ದು ನಿಪಿ7 ರ ಅಂಶಗಳನ್ನು ತಿಳಿದುಕೊಂಡು ಅದಕ್ಕೆ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳಿಗೆ ಸಂಬಂದ ಪಟ್ಟಂತೆ ನಾನು ಅದೇ ದಿನ ಪೋಲೀಸರಿಗೆ ಈಗ ವಿವರವಾಗಿ ಓದಿ ಹೇಳಿದಂತೆ " ದಿಃ25.06.2023 ರಂದು ಮ.12.00 ಗಂಟೆಯಲ್ಲಿ ------ ಮಾಲುಗಳನ್ನು ನೋಡಿದರೆ ನಾನು ಗುರುತಿಸುತ್ತೇನೆ " ಎಂದು ನಾನು ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಒಪ್ಪದ ಹೇಳಿಕೆಯನ್ನು ನಿಪಿ9 ಎಂದು ಗುರುತಿಸಲಾಯಿತು. ಸದರಿ ಮೇಲೆ ಹೇಳಿದ ವಿಚಾರದ ಬಗ್ಗೆ ನನಗೆ ಗೊತ್ತಿದ್ದರೂ ಸಹ ಆರೋಪಿತರಿಗೆ ಸಹಾಯ ಮಾಡಲು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತಗೊಳಿಸಲಾಗಿದೆ).**

**ಓದಿ ಹೇಳಿ ಕೇಳಿ ಸರಿ ಇದೆ**

**Sd/-**

**C/c 2 ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕೆಜಿಎಫ್.**